ಈರಣ್ಣನ ಪಾಳ್ಯಗಳಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಕಾರ್ಯಾರಂಭಗೊಳಿಸಲಾಗಿದೆ.

(ಇ) ಮಾಗಡಿ ಕ್ಷೇತ್ರ ವ್ಯಾಪ್ತಿಯ ಉಳಿದ ಗ್ರಾಮಗಳಲ್ಲಿ ನಿರಂತರ ಜ್ಯೋತಿ ಯೋಜನೆಯನ್ನು 3ನೇ ಹಂತದಲ್ಲಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಒಳಚರಂಡಿ ಕಾಮಗಾರಿ

881 (903); ಶ್ರೀ ಬಣಕಾರ್ ಯು. ಬಿ. (ಹಿರೇಕೆರೂರು)

(ಅ) ಹಿರೇಕೆರೂರು ಪಟ್ಟಣದ ಒಳಚರಂಡಿ ಕಾಮಗಾರಿ ಯೋಜನೆ ಯಾವ ಹಂತದಲ್ಲಿದೆ;

(ಆ) ಆ ಯೋಜನೆಯ ವಿವರಗಳೇನು;

(ಇ) ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು; ಇದಕ್ಕೆ ಕಾಲಮಿತಿ ನಿಗದಿ ಮಾಡಲಾಗಿದೆಯೇ?

ಶ್ರೀ ವಿನಯಕುಮಾರ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು)

(ಅ) ಹಿರೇಕೆರೂರು ಪಟ್ಟಣದ ಒಳಚರಂಡಿ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ ನಅಇ/06/ಯುಡಿಎಸ್/2011, ಬೆಂಗಳೂರು, ದಿನಾಂಕ: 17–11–2011 ರಲ್ಲಿ ರೂ. 827.13 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಮತ್ತು ಇದೇ ಮೊತ್ತಕ್ಕೆ ಮಂಡಳಿಯಿಂದ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆ. ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸದೇ ಇರಲು ಕಾರಣ, ಗ್ರಾಮಸಾರ ಶುದ್ಧೀಕರಣ ಘಟಕ ನಿರ್ಮಾಣಕ್ಕೆ ಅಗತ್ಯ ಇರುವ ನಿವೇಶನವನ್ನು ಬಸರಿಹಳ್ಳಿ ರಿ.ಸ.ನಂ.149 ರಲ್ಲಿ 4 ಎಕರೆ ಜಮೀನನ್ನು ದಿನಾಂಕ 22–06–2012 ರಲ್ಲಿ ಮಂಡಳಿಗೆ ಹಸ್ತಾಂತರಿಸಲಾಗಿದ್ದು ಈ ಭೂಮಿಯಲ್ಲಿ ಘಟಕ ನಿರ್ಮಾಣದ ಬಗ್ಗೆ ಇದ್ದ ತಕರಾರನ್ನು ಸ್ಥಳೀಯ ಘನ ನ್ಯಾಯಾಲಯ ದಿಂದ ದಿನಾಂಕ: 12–07–2013ರಲ್ಲಿ ಸ್ಥಳೀಯ

ಸಂಸ್ಥೆಯ ಪರವಾಗಿ ತೀರ್ಮಾನವಾಗಿರುವುದು. ಯೋಜನೆಯಡಿ ಗೃಹ ಸಂಪರ್ಕ ಮತ್ತು ಅಗೆದ ರಸ್ತೆಯ ದುರಸ್ಥಿ ಕಾಮಗಾರಿಯನ್ನು ಕೈಗೊಳ್ಳಲು ಪ್ರತ್ಯೇಕವಾದ ಅಂದಾಜನ್ನು ಮಂಡಳಿಯಿಂದ ತಯಾರಿಸಲಾಗುತ್ತಿದ್ದು. ಸದರಿ ಅಂದಾಜು ಪಟ್ಟಿಗೆ ಸರ್ಕಾರದ ಅನುಮೋದನೆ ನಂತರ ಪಟ್ಟಣದ ಒಳಚರಂಡಿ ಯೋಜನೆಯ ಕಾಮಗಾರಿಗಳನ್ನು ಒಟ್ಟಾಗಿ ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು.

(ಆ) 1) 150 ಮಿ.ಮೀ. ನಿಂದ 350 ಮಿಮೀ ವಿವಿಧ ವ್ಯಾಸದ ಸ್ಟೋನ್‌ವೇರ್ ಮತ್ತು ಆರ್‌ಸಿಸಿ ಕೊಳವೆ ಮಾರ್ಗ ಸರಬರಾಜು ಮಾಡಿ ಅಳವಡಿಸುವುದು. 36.30 ಕಿ. ಮೀ. ಉದ್ದ.

2) 1375 ಸಂಖ್ಯೆ ಆಳಗುಂಡಿಗಳನ್ನು ನಿರ್ಮಿಸುವುದು.

3) ಝೋನ್– 1ರಲ್ಲಿ ವೆಟ್‌ವೆಲ್ ನಿರ್ಮಾಣ – 1 ಸಂಖ್ಯೆ

4) ಝೋನ್–1ರ ವೆಟ್‌ವೆಲ್‌ನಲ್ಲಿ ಯಂತ್ರೋಪಕರಣಗಳನ್ನು ಸರಬರಾಜು ಮಾಡಿ ಅಳವಡಿಸುವುದು.

5) ಝೋನ್–1ರ ವೆಟ್‌ವೆಲ್ ಹತ್ತಿರ 63 ಕೆವಿಎ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್ ಸಬ್ ಸ್ಟೇಷನ್ ನಿರ್ಮಿಸುವುದು.

6) ವೆಟ್ ವೆಲ್ ನಿಂದ ಎಸ್‌ಟಿಪಿ ವರೆಗೆ 250 ಮಿಮೀ ವ್ಯಾಸದ ಏರು ಕೊಳವೆ ಮಾರ್ಗ ಸರಬರಾಜು ಮಾಡಿ ಅಳವಡಿಸುವುದು.

7) ಝೋನ್ – 1ರಲ್ಲಿ 2 ಸಂಖ್ಯೆ ಝೋನ್ –2ರಲ್ಲಿ 3 ಸಂಖ್ಯೆ ಝೋನ್–3ರಲ್ಲಿ 1 ಸಂಖ್ಯೆ ಝೋನ್–4 ರಲ್ಲಿ 1 ಸಂಖ್ಯೆ ಸೆಪ್ಟಿಕ್ ಟ್ಯಾಂಕ್ ನಿರ್ಮಾಣ.

8) 2.44 ಎಂಎಲ್‌ಡಿ ಸಾಮರ್ಥ್ಯದ ಗ್ರಾಮಸಾರ ಶುದ್ಧೀಕರಣ ಘಟಕ ನಿರ್ಮಿಸುವುದು.

(ಇ) ಹೊಸದಾಗಿ ಯೋಜನೆಯಡಿ ಗೃಹ ಸಂಪರ್ಕ ಮತ್ತು ಅಗೆದ ರಸ್ತೆಯ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲು ಪ್ರತ್ಯೇಕವಾದ ಅಂದಾಜನ್ನು ಮಂಡಳಿಯು ತಯಾರಿಸಿದ್ದು, ಪ್ರಸ್ತಾವನೆ ಪಡೆದು ಪರಿಶೀಲಿಸಿ ಅನುಮೋದನೆ ನೀಡಲಾಗುವುದು.

ರಾಷ್ಟ್ರೀಯ ಹೆದ್ದಾರಿಗಳು

882 (408); ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ)

(ಅ) ರಾಜ್ಯದಲ್ಲಿ ಎಷ್ಟು ರಾಷ್ಟ್ರೀಯ ಹೆದ್ದಾರಿಗಳಿವೆ; ಅವುಗಳ ಸಂಪೂರ್ಣ ವಿವರ ನೀಡುವುದು; (ಕಿ. ಮೀ. ಯಾವ ಪ್ರದೇಶದಿಂದ ಯಾವ ಪ್ರದೇಶದವರೆಗೆ, ಹೆದ್ದಾರಿ ಹೆಸರು, ಮಂಜೂರಾದ ವಿವರ ಮತ್ತು ಸಂಖ್ಯೆ ಇತ್ಯಾದಿ)

(ಆ) ಕೇಂದ್ರ ಸರ್ಕಾರವು ರಾಷ್ಟ್ರೀಯ ಹೆದ್ದಾರಿಗಳ ನಿರ್ವಹಣೆ ಮತ್ತು ಸುಧಾರಣೆಗೆ ಎಷ್ಟು ಹಣವನ್ನು 2013–14ರಲ್ಲಿ ನೀಡಿದೆ; 2014–15ರಲ್ಲಿ ಎಷ್ಟು ಹಣ ಕೊಡಲಿದೆ?

ಡಾ. ಹೆಚ್. ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

(ಅ) ರಾಜ್ಯದಲ್ಲಿ ಒಟ್ಟು 24 ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗುತ್ತಿದ್ದು, ಅವುಗಳ ಒಟ್ಟು ಉದ್ದ 6326 ಕಿಮೀ. ಅವುಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

(ಆ) ರಾಷ್ಟ್ರೀಯ ಹೆದ್ದಾರಿ ವಲಯದ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ನಿರ್ವಹಣೆಗಾಗಿ ಒದಗಿಸಲಾದ ಅನುದಾನದ ವಿವರ ಗಳು ಈ ಕೆಳಕಂಡಂತಿವೆ: